ದುಡಿವ ವರ್ಗದ ಸಿಂಹ ಧ್ವನಿ ಇನ್ನಿಲ್ಲ



ಕಾಮ್ರೇಡ್ ಸೂರಿ ಲಾಲ್ ಸಲಾಂ

ಇದು ಆಘಾತಕರ, ಬರಸಿಡಿಲು ಬಡಿದ ಸುದ್ದಿ. ಕಾರ್ಮಿಕ ವರ್ಗದ ಸಮರಶೀಲ ಸಿಂಹದ ಘರ್ಜನೆ ಇನ್ನು ಕೇಳಲಾಗದು. ಜನತೆಯನ್ನು ಹಿಂಡುವ ಆರ್ಥಿಕ ನೀತಿಗಳ ವಿರುದ್ಧ, ದುಡಿವ ವರ್ಗವನ್ನು ವಿಭಜಿಸಿ, ಆಳುವ ವರ್ಗದ ಕ್ರೂರ ಮರ್ಧನದ ಫ್ಯಾಸಿಸ್ಟ್ ರೂಪದ ದಬ್ಬಾಳಿಕೆ ಹೇರುವ ಕೋಮುವಾದಿ ಸಂಚುಗಳ ವಿರುದ್ಧ ದುಡಿವ ಜನತೆಯ ಐಕ್ಯತೆಗಾಗಿ ಅಹೋರತ ಸೆಣಸಿದ ಅವರಿನ್ನಿಲ್ಲ. ಹೋರಾಟದ ಕಿಚ್ಚು ತುಂಬುವ, ಎಂತಹ ಕಠಿಣ ಸಂದರ್ಭದಲ್ಲಿಯೂ ಮುನ್ನುಗ್ಗುವ ಮಾರ್ಗದರ್ಶನ ಇನ್ನಿಲ್ಲ.......

ಐಕ್ಯರಂಗದ ಕಂಬನಿ...

ಐಕ್ಯರಂಗ

ವಿಶೇಷ ಪುರವಣಿ

ಜುಲೈ 1, 2002 ಬೆಲೆ ರೂ. 2.00

http:// www.geocities.com/aikyaranga

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗದ ಕಂಬನಿ

ಮುಖಪುಟದಿಂದ..

ಸಮರಶೀಲತೆಯ ಇನ್ನೊಂದು ಹೆಸರೇ ಕಾಮ್ರೇಡ್ ಸೂರಿ. ಕಾರ್ಮಿಕ ವರ್ಗದ ವರ್ಗ ಹೋರಾಟದ ಉನ್ನತ ರಾಜಕೀಯ ಪ್ರಜ್ಞೆ, ಮಾರ್ಕ್ಸ್‌ವಾದ-ಲೆನಿನ್‌ವಾದದ ಸೈದ್ಧಾಂತಿಕ ಸತ್ವದಿಂದ ದುಡಿವ ಜನಕೋಟಿಯ ಬಗೆಗಿನ ಅಪಾರ ಪ್ರೀತಿ. ದುಡಿವ ವರ್ಗದ ವಿಮೋಚನೆಗೆ ಅಚಲವಾದ ಬದ್ಧತೆ, ಪ್ರಾಯೋಗಿಕ ಅನುಭವಗಳು ಅವರನ್ನು ಅಪ್ರತಿಮ ಕ್ರಾಂತಿಕಾರಿಯನ್ನಾಗಿಸಿದವು. ದುಡಿವ ವರ್ಗದಿಂದ ಇವೆಲ್ಲವನ್ನೂ ಪಡೆದರು. ಅವೆಲ್ಲವನ್ನೂ ದುಡಿವ ವರ್ಗಕ್ಕೆ ಧಾರೆಯೆರೆದರು. ಕಾರ್ಮಿಕ ಚಳುವಳಿಯಲ್ಲಿನ ರಾಜಿ ಮನೋಭಾವ ಧಿಕ್ಕರಿಸಿ ವರ್ಗ ಹೋರಾಟದ ಮೊನಚು ನೀಡಿ ಸಂಘರ್ಷದ ಹೊಸ ಬೆಳಕು ಹತ್ತಿಸಿದರು.

ಸಾಮ್ರಾಜ್ಯಶಾಹಿ ವಿರುದ್ಧದ ಭಾರತ ಸ್ವಾತಂತ್ರ್ಯ ಸಂಗ್ರಾಮದ ಒಂದು ಅತ್ಯುತ್ತಮ ಕೊಡುಗೆ ಸಂಗಾತಿ ಸೂರಿಯವರು. ಗಳಿಸಿದ ಸ್ವಾತಂತ್ರ್ಯ ಜನಸಾಮಾನ್ಯರ, ರೈತ ಕಾರ್ಮಿಕ ಕೂಲಿಕಾರರಿಗೆದಕ್ಕಬೇಕೆಂದು ದಣಿವರಿಯದ ಸಮರ ಹೂಡಿದರು. ಅವರು ಕಟ್ಟಿದ ಹೋರಾಟಗಳಿಗೆ ಲೆಕ್ಕವಿಲ್ಲ. ಕರ್ನಾಟಕ ರಾಜ್ಯದ ಅದರಲ್ಲೂ ಬೆಂಗಳೂರಿನ ಬೆಳವಣಿಗೆಯಲ್ಲಿ ಅವರದೊಂದು ಅಚ್ಚಳಿಯದ ಪಾತ್ರವಿದೆ. ಜನತೆಯ ಹೋರಾಟಗಳ ವಿಶ್ವವಿದ್ಯಾನಿಲಯದಿಂದ ಉನ್ನತ ಹಂತ ತಲುಪಿದ ಜನನಾಯಕ ಕಾಂ. ಸೂರಿಯವರು ಕಾರ್ಮಿಕ ವರ್ಗದಲ್ಲಿ ವರ್ಗ ಜಾಗೃತಿ ಮೂಡಿಸಲು ಕ್ರಾಂತಿಕಾರಿ ಹೋರಾಟದ ಮುಂಚೂಣಿ ವಹಿಸಲು ಸೈದ್ಧಾಂತಿಕ ಶಿಕ್ಷಣ ಅಗತ್ಯವೆಂದು ಪ್ರತಿಪಾದಿಸುತ್ತಿದ್ದರು. ಇಂತಹ ಉನ್ನತ ರಾಜಕೀಯ ಪ್ರಜ್ಞೆ ರೂಪಿಸಲು ಐಕ್ಯರಂಗದ ಬೆಳವಣಿಗೆ, ಪ್ರಸಾರದತ್ತ ಸದಾ ಜತನದಿಂದ ಎಲ್ಲ ನೆರವು ನೀಡುತ್ತಿದ್ದರು. ಅವರು ಪತ್ರಿಕೆಯ ಪ್ರಕಾಶಕರೂ ಕೂಡ.

ದುಡಿವ ವರ್ಗದ ಸಮರಶೀಲ ಸೇನಾನಿಗೆ ಐಕ್ಯರಂಗದ ಶ್ರದ್ಧಾಂಜಲಿ.

ಲಾಲ್ ಸಲಾಂ ಕಾಮ್ರೇಡ್ ಸೂರಿ.

ಶ್ರದ್ಧಾಂಜಲಿ

ಕರ್ನಾಟಕದಲ್ಲಿ ದುಡಿವ ಜನರ ಆಂದೋಲನ ಕಟ್ಟಿದ ಹಿರಿಯ ಚೇತನ

ಜ್ಯೋತಿ ಬಸು



ಕಾಂ.ಎಸ್.ಸೂರ್ಯನಾರಾಯಣ ರಾವ್‌ರವರ ನಿಧನದ ಸುದ್ದಿಯ ಬಗ್ಗೆ ಆಘಾತ ವ್ಯಕ್ತಪಡಿಸುತ್ತಾ ದೇಶದ ಹಿರಿಯ ಕಮ್ಯುನಿಸ್ಟ್ ಮುತ್ಸದ್ದಿ ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಜ್ಯೋತಿಬಸುರವರು ಕರ್ನಾಟಕದಲ್ಲಿ ಅವರೊಬ್ಬ ಹಿರಿಯ ಕಾರ್ಮಿಕ ಮುಖಂಡರು ಎಂದಿದ್ದಾರೆ. ರಾಜ್ಯದಲ್ಲಿ ಕಮ್ಯುನಿಸ್ಟ್ ಆಂದೋಲನವನ್ನು ಕಟ್ಟುವಲ್ಲಿ ಅವರು ಸಕಾರಾತ್ಮಕ ಕೊಡುಗೆ ನೀಡಿದವರು ಎಂದು ಸ್ಮರಿಸಿಕೊಳ್ಳುತ್ತಾ ಕಾಂ. ಜ್ಯೋತಿಬಸು ಅವರ ದುಃಖ ತಪ್ತ ಕುಟುಂಬಕ್ಕೆ, ಸಂಗಾತಿಗಳಿಗೆ ಹಾಗೂ ಗೆಳೆಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದ್ದಾರೆ.

ಅನಿಲ್ ಬಿಸ್ವಾಸ್ ಶ್ರದ್ಧಾಂಜಲಿ: ಕಾಂ. ಸೂರ್ಯನಾರಾಯಣ ರಾವ್‌ರವರ ನಿಧನದ ಬಗ್ಗೆ ದುಃಖ ವ್ಯಕ್ತಪಡಿಸುತ್ತಾ ಪಶ್ಚಿಮ ಬಂಗಾಳದ ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಅನಿಲ್ ಬಿಸ್ವಾಸ್ ಕರ್ನಾಟಕದಲ್ಲಿ ಪಕ್ಷ ಕಟ್ಟುವಲ್ಲಿ ಅವರ ಕೊಡುಗೆಗಳನ್ನು ನೆನಪಿಸಿಕೊಂಡಿದ್ದಾರೆ.

ಆಂಧ್ರ ರಾಜ್ಯ ಸಮಿತಿ ಸಂತಾಪ: ಕಾಂ. ಸೂರ್ಯನಾರಾಯಣ ರಾವ್‌ರವರ ನಿಧನ ಕರ್ನಾಟಕದ ಕಮ್ಯುನಿಸ್ಟ್ ಆಂದೋಲನಕ್ಕೆ ಒಂದು ಮಹಾನ್ ನಷ್ಟ ಎಂದು ಸಿಪಿಐ(ಎಂ) ಆಂಧ್ರಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಬಿ.ವಿ.ರಾಘವಲು ಹಾಗೂ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಕೊರಟಾಲ ಸತ್ಯನಾರಾಯಣ ಸಂತಾಪ ವ್ಯಕ್ತಪಡಿಸಿದ್ದಾರೆ.

ಧೀಮಂತ ಚೇತನ

ಕಾಂ.ಎಸ್.ಸೂರ್ಯನಾರಾಯಣ ರಾವ್‌ರವರು ರಾಜ್ಯ ಕಮ್ಯುನಿಸ್ಟ್ ಚಳುವಳಿಯ ಧೀಮಂತ ಚೇತನ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ಸ್ವಾತಂತ್ರ್ಯಾನಂತರ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಅವರು ತಮ್ಮ ಇಡೀ ಬದುಕನ್ನು ಶೋಷಿತ ವರ್ಗದ, ದುಡಿಯುವ ವರ್ಗದ ವಿಮೋಚನೆಗಾಗಿ ಸಮರ್ಪಿಸಿಕೊಂಡು ರಾಜ್ಯದಲ್ಲಿ ಅಸಂಖ್ಯಾತ ಕಾರ್ಮಿಕ, ರೈತ-ಕೂಲಿಕಾರರ ಚಳುವಳಿಗೆ ನೇತೃತ್ವ ನೀಡಿರುವುದನ್ನು ರಾಜ್ಯ ಸಮಿತಿ ನೆನಪಿಸಿಕೊಂಡಿದೆ.

ಸಿಐಟಿಯು ಸಂತಾಪ: ಕಾಮ್ರೇಡ್ ಸೂರ್ಯನಾರಾಯಣ ರಾವ್‌ರವರ ನಿಧನದಿಂದ ಕರ್ನಾಟಕ ರಾಜ್ಯದ ದುಡಿಯುವ ಜನರ ಚಳುವಳಿಗೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ದುಃಖ ವ್ಯಕ್ತಪಡಿಸುತ್ತಾ ರಾಜ್ಯದ ಯಾವ ಮೂಲೆಯಲ್ಲಿ ಕಾರ್ಮಿಕರು ಸಂಕಷ್ಟದಲ್ಲಿದ್ದರೂ ಶೋಷಿತ ಕಾರ್ಮಿಕರ ಹಿತರಕ್ಷಣೆಗಾಗಿ ಮುಂಚೂಣಿಯಲ್ಲಿದ್ದು ಕಾರ್ಮಿಕರಿಗೆ ಹುಮ್ಮಸ್ಸು ನೀಡಿ ಆತ್ಮವಿಶ್ವಾಸ ತುಂಬಿ ಹೋರಾಟದ ಹಾದಿಯಲ್ಲಿ ಮುನ್ನಡೆಯುವಂತೆ ಸ್ಫೂರ್ತಿ ನೀಡುತ್ತಿದ್ದರು ಎಂದು ನೆನಪಿಸಿಕೊಂಡಿದೆ.

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘದ ಶ್ರದ್ಧಾಂಜಲಿ: ಅವರು ದುಡಿವ ಜನರ ಒಡನಾಡಿ ಎಂದು ಶ್ರದ್ಧಾಂಜಲಿ ಅರ್ಪಿಸುತ್ತಾ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘ ರಾಜ್ಯದಲ್ಲಿ ಅತ್ಯಂತ ಶೋಷಿತ ರೈತ ಮತ್ತು ಕೂಲಿಕಾರರನ್ನು ಸಂಘಟಿಸುವಲ್ಲಿ ಮತ್ತು ಕನಿಷ್ಟ ಕೂಲಿ, ಭೂಮಿಗಾಗಿ ನಡೆಯುತ್ತಿದ್ದ ಚಳುವಳಿಗಳಲ್ಲಿ ಭಾಗಿಯಾಗಿ ಶ್ರಮಿಸುತ್ತಿದ್ದವರು ಕಾಂ. ಸೂರಿ ಎಂದಿವೆ.

ವಿದ್ಯಾರ್ಥಿ, ಯುವಜನ ಮತ್ತು ಮಹಿಳೆಯರ ಸಂತಾಪ: ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಚಳುವಳಿ ಮಾತ್ರವಲ್ಲದೆ ವಿದ್ಯಾರ್ಥಿ, ಯುವಜನ, ಮಹಿಳಾ ಚಳುವಳಿಗೂ ಅವರು ಮಾರ್ಗದರ್ಶಿಗಳೂ, ಬೆಂಬಲಿಗರೂ ಆಗಿದ್ದರು ಎಂದು ಎಸ್‌ಎಫ್‌ಐ, ಡಿವೈಎಫ್‌ಐ ಹಾಗೂ ಜೆಎಂಎಸ್ ರಾಜ್ಯ ಸಮಿತಿಗಳು ಶ್ರದ್ಧಾಂಜಲಿ ಅರ್ಪಿಸಿವೆ.

ನಂಬಲಿಕ್ಕೆ ಸಾಧ್ಯವಿಲ್ಲದ ಸಾವಿನ ವಾರ್ತೆ

ಜಿ.ವಿ.ಶ್ರೀರಾಮರೆಡ್ಡಿ

ಏನು ಹೇಳಬೇಕು, ಕಾಂ ಸೂರಿ ಇನ್ನಿಲ್ಲ ಎಂಬ ವಾರ್ತೆ ಒಂದು ಬರಸಿಡಿಲಿನಂತೆ ಬಂದು ಎರಗಿದೆ. ಸೂರ್ಯನಾರಾಯಣ ರಾವ್ ಇಲ್ಲದ ಕಮ್ಯುನಿಸ್ಟ್ ಪಕ್ಷವನ್ನು ನೆನೆಯುವುದೇ ಒಂದು ಅನಾಥ ಭಾವನೆ ಬರುತ್ತದೆ. ಮತ್ತು ಕಾರ್ಮಿಕ ವರ್ಗದ ಜೊತೆ ತಮ್ಮ ಸುದೀರ್ಘ ಸಂಬಂಧ ಆ ರೀತಿಯಲ್ಲಿ ಬೆಳೆದು ಬಂದಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಹೋರಾಟವೆಂದರೆ ಕಾಂ. ಸೂರಿ, ಸೂರಿ ಎಂದರೆ ಕಾರ್ಮಿಕರು ಎಂಬ ರೀತಿಯಲ್ಲಿ ಕರ್ನಾಟಕದ ಜನತೆ ಭಾವಿಸಿದ್ದರು. ತಾ. 21.6.2002 ಕೋಲಾರ ಜಿಲ್ಲಾ ಪಕ್ಷದ ಜಿಲ್ಲಾ ಸಮಿತಿಗೆ ಬಂದಿದ್ದಾಗಲೇ ಅವರ ನನ್ನ ಕಡೆಯ ಭೇಟಿ ಆಗುತ್ತೆ ಎಂಬು ನಾನು ನೆನೆಸಿರಲಿಲ್ಲ.

ನಾನು ಕಾಂ.ಸೂರಿಯವರನ್ನು ಮೊಟ್ಟ ಮೊದಲ ಬಾರಿಗೆ ನೋಡಿದ್ದು 1971 ರಲ್ಲಿ. ನಾವು ಆಗತಾನೆ ಎಸ್‌ಎಫ್‌ಐ ನ ಸ್ಥಾಪನ ಸಮ್ಮೇಳನದಲ್ಲಿ ಭಾಗವಹಿಸಿ ತಿರುವನಂತಪುರದಿಂದ ಬಂದು ಆಗಿನ ಸುಲ್ತಾನ್‌ಪೇಟೆಯ ಪಕ್ಷದ ಕಛೇರಿಯಲ್ಲಿ ಕೂತಿದ್ದೆ. ಅಲ್ಲಿಗೆ ಬಂದ ಕಾಂ. ಸೂರಿ ಅವರನ್ನು ನನಗೆ ಅಲ್ಲಿದ್ದ ಸಂಗಾತಿಯೊಬ್ಬರು ಪರಿಚಯ ಮಾಡಿಕೊಟ್ಟರು. ಓಹೋ, ನೀನು ಟಿ.ಕೆ.ಗಂಗಿರೆಡ್ಡಿಯವರ ಸಂಬಂಧಿ ಏನಯ್ಯ. ಚೆನ್ನಾಗಿ ಸಂಘಟನೆ ಕಟ್ಟಬೇಕಯ್ಯ ಎಂದು ಹೇಳಿದ ಮಾತುಗಳು ನನಗೆ ಇನ್ನೂ ಹಚ್ಚ ಹಸಿರಾಗಿಯೇ ಉಳಿದಿದೆ. ಅಲ್ಲಿಂದ ಮೊನ್ನೆ 21ನೇ ತಾರೀಖಿನವರೆಗೂ ಯಾವಾಗಲೇ ಸಿಕ್ಕಲಿ, ಎಲ್ಲೇ ಇರಲೀ ಸಂಘಟನೆ ಕೆಲಸ, ಪಕ್ಷದ ಕೆಲಸ, ಹೋರಾಟಗಳನ್ನು ಬಿಟ್ಟರೆ ಬೇರೆ ಏನನ್ನೂ ಕೇಳುತ್ತಿದ್ದವ್ರು ವಿರಳ. ತನ್ನ ಜೀವನದ ಉದ್ದಕ್ಕೂ ಕಾರ್ಮಿಕರ ಸಂಘಟನೆ, ಹೋರಾಟ, ಪಕ್ಷ ಇದೇ ಅವರ ಜೀವನವಾಗಿತ್ತು. ಹೋರಾಟಗಳ ಸಂದರ್ಭದಲ್ಲಿ ಎಂಥ ಪರಿಸ್ಥಿತಿಯಲ್ಲೂ ಅವರು ತೋರುತ್ತಿದ್ದ ಎದೆಗಾರಿಕೆ ಅಸಾಮಾನ್ಯ. ಭಯ ಅನ್ನುವ ಆತಂಕವೆಂಬುದೇ ಅವರಿಗೆ ಗೊತ್ತಿರಲಿಲ್ಲ. ಕಾರ್ಮಿಕ ಸಂಘಗಳನ್ನು ಮುರಿಯುವ ಗೂಂಡಾಗಳನ್ನು ಮಾಲಿಕರ ಏಜೆಂಟರನ್ನು ಅವರು ಎದುರಿಸುತ್ತಿದ್ದ ರೀತಿ ಅಸಮಾನ್ಯ. 1978 ರ ಸಮಯದಲ್ಲಿ ಮೈಕೋ ಯೂನಿಯನ್ನು ಸಂಘಟನೆ ವಿಷಯದಲ್ಲಿ ದೇವಾಂಗ ಸಂಘದ ಹಾಲಿನಲ್ಲಿ ನಡೆದ ಘಟನೆ ನನಗೆ ಇನ್ನೂ ನೆನಪಿದೆ. ಒಳಗಡೆ ಸಭೆ ನಡೆಯುತ್ತಿದ್ದರೆ ಅತ್ತಕಡೆ ನಮ್ಮ ವಿರೋಧಿಗಳ ಗುಂಪು ದೊಣ್ಣೆ ಮತ್ತು ರಾಡುಗಳನ್ನು ಹಿಡಿದು ಆ ಸಭೆಯನ್ನು ನಡೆಯದ ಹಾಗೆ ಮಾಡಲು 10-12 ಕಾರುಗಳಲ್ಲಿ ಬಂದು ಹಾಲಿನ ಸುತ್ತಲೂ ನಿಂತಿದ್ದಾರೆ. ನಾನು ಮತ್ತು ಕಾಂ. ಪಿ.ಜಗನ್ನಾಥ್ ಒಂದು ಬಾಗಿಲಲ್ಲಿ ನಿಂತು ತಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಗಂಭೀರವಾದ ಸ್ಥಿತಿ ಉಂಟಾಗಿದೆ. ಕಾಂ. ಸೂರಿ ಅವರು ಕಾರ್ಮಿಕರನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ. ಯಾರೋ ಹೋಗಿ ಗೂಂಡಾಗಳು ಬಂದಿರುವ ಸುದ್ದಿಯನ್ನು ಕಾಂ.ಸೂರಿ ಅವರಿಗೆ ತಿಳಿಸಿದ ತಕ್ಷಣ ಅವರ ಪ್ರತಿಕ್ರಿಯೆಗೆ ಇಡೀ ಸಭೆ ಅವಕ್ಕಾಯಿತು. "ಏ ನಾನು ಕಮ್ಯುನಿಸ್ಟ್ ಕ್ರಾಂತಿಕಾರಿ. ನಾನು ಸಾವಿಗೆ ಹೆದರುವವನಲ್ಲ. ಅವರಿಗೆ ತಾಕತ್ತಿದ್ದರೆ ಒಳಗಡೆ ಬರಲಿಕ್ಕೆ ಹೇಳು" ಎಂದು ಅಲ್ಲಿ ಗುಡುಗಿದ ಅವರ ಎದೆಗಾರಿಕೆಗೆ ಯಾರಾದರೂ ಅಭಿನಂದಿಸಲೇ ಬೇಕು.


ಕಾರ್ಮಿಕ ಚಳುವಳಿಯಲ್ಲಿ ಮತ್ತು ಪಕ್ಷದ ರಾಜಕೀಯ ಜೀವನದಲ್ಲಿ ಅವರಿಗೆ ಬಂದ ಎಲ್ಲಾ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದ ರೀತಿ ಬಹಳ ಸೋಜಿಗ ಮತ್ತು ಆದರ್ಶ ಪ್ರಾಯವಾಗಿತ್ತು. 1964 ರಲ್ಲಿ ಪಕ್ಷದಲ್ಲಿ ಒಳಗಡೆ ಪರಿಷ್ಕರಣವಾದಿಗಳ ವಿರುದ್ಧ ನಡೆದ ಹೋರಾಟದಲ್ಲಿ ಅವರು ಪರಿಷ್ಕರಣವಾದಿಗಳನ್ನು ಎದುರಿಸಿ ಮತ್ತು ಅವರ ವಿರುದ್ಧ ಕೊನೆಯುವರೆಗೂ ಹೋರಾಡಿದ ರೀತಿ ಸಂಗಾತಿಗಳಿಗೆ ಉದಾಹರಣೆ ಆಗಿದೆ. ತನ್ನ ಇಡೀ ಜೀವನದಲ್ಲಿ ಅವರ ಕಾರ್ಮಿಕರ ಪರ ಚಿಂತನೆ ಬಿಟ್ಟು ಬೇರೆ ಏನನ್ನೂ ಅವರ ಆಲೋಚನೆ ಮಾಡಿದ್ದು ನನಗೆ ಜ್ಞಾಪಕ ಇಲ್ಲ. ಕಾರ್ಮಿಕ ವರ್ಗದ ಬಗ್ಗೆ ಮತ್ತು ಆ ವರ್ಗದ ಕ್ರಾಂತಿಕಾರಿ ಶಕ್ತಿಯ ಬಗ್ಗೆ ಅವರಿಗೆ ಇದ್ದ ನಂಬಿಕೆ ಅಚಲ. ಅದು ಇಷ್ಟು ಇಳಿವಯಸ್ಸಿನಲ್ಲೂ ಅವರನ್ನು ಒಬ್ಬ ಯುವಕನ ಹಾಗೆ ಮಾಡಿತ್ತು. ದಣಿವರಿಯದ ಅವರ ಕೆಲಸ ಯಾರಿಗಾದರೂ ಆಶ್ಚರ್ಯ ಮೂಡಿಸುತ್ತಿತ್ತು. ಇಷ್ಟು ಇಳಿ ವಯಸ್ಸಿನಲ್ಲೂ ಇಡೀ ದೇಶದ ಉದ್ದಗಲಕ್ಕೂ ಅವರು ತಿರುಗಾಡುತ್ತಿದ್ದ ಪರಿ ನೋಡಿದರೆ ಅವರಿಗಿಂತ ಎಷ್ಟೋ ವರ್ಷಗಳು ಕಿರಿಯವರಾದ ನಮಗೆ ನಾಚಿಕೆ ಆಗುತ್ತಿತ್ತು. ಅವರ ಜ್ಞಾಪಕ ಶಕ್ತಿ ಅಗಾಧ. ಅವರು ಡೈರಿಯನ್ನು ಇಟ್ಟು ತಾರೀಖುಗಳು, ಕಾರ್ಯಕ್ರಮಗಳನ್ನು ಗುರುತು ಹಾಕಿಕೊಂಡಿದ್ದನ್ನು ನನ್ನ 30 ವರ್ಷದ ಸಾಂಗತ್ಯದಲ್ಲಿ ನೋಡೇ ಇಲ್ಲ. ಅವರ ಮಿದುಳೇ ಒಂದು ಕಂಪ್ಯೂಟರ್ ರೀತಿಯಲ್ಲಿ ಯಾವ ತಾರಿಖಿಗೆ ಎಲ್ಲಿಗೆ ಹೋಗಬೇಕು, ಏನು ಕಾರ್ಯಕ್ರಮ ಎಂದು ಟಕಟಕ ಹೇಳಿ ಬಿಡುತ್ತಿದ್ದರು. ಹಾಗೆ ಯಾವುದೇ ರಾಜಕೀಯ ಸಂದಿಗ್ಧ ಪರಿಸ್ಥಿತಿಗಳು, ಕ್ಲಿಷ್ಟ ಸಮಸ್ಯೆಗಳು ಎದುರಾದಂತಹ ಸಂದರ್ಭದಲ್ಲಿ ಅವರ ಆಲೋಚನೆ ಎಷ್ಟು ಮೊನಚಾಗಿರುತ್ತಿತ್ತು ಎಂದರೆ ಅದು ಊಹೆಗೂ ಅಸಾಧ್ಯವಾಗುತ್ತಿತ್ತು.

ತನಗೆ ಅನಿಸಿದ್ದನ್ನು ಯಾರಿಗೆ ಆಗಲಿ ನೇರವಾಗಿ ಮುಖದ ಮೇಲೆ ಹೊಡೆದ ಹಾಗೆ ಹೇಳುತ್ತಿದ್ದ ಅವರ ನಿಷ್ಕಲ್ಮಶ ಹೃದಯವಂತಿಕೆ ಹಲವಾರು ಸಂದರ್ಭಗಳಲ್ಲಿ ಕೆಲವರಿ ಕಿರಿಕಿರಿ ಅನ್ನಿಸಿದರು ಅವರ ನಿಷ್ಕಪಟದ ಹೃದಯಕ್ಕೆ ಸಾಕ್ಷಿಯಾಗಿರುತ್ತಿತ್ತು. ಅವರಲ್ಲಿ ತಕ್ಷಣ ಸಿಡುಕುವ ಸ್ವಭಾವವಿದ್ದರೂ ಆದರೆ ಯಾವುದೇ ದುರುದ್ದೇಶ ಇರುತ್ತಿರಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು.

ಇಂದು ನಮ್ಮ ಪಕ್ಷ ಮತ್ತು ಕರ್ನಾಟಕ ರಾಜ್ಯದ ಕಾರ್ಮಿಕ ಚಳುವಳಿ ಕಾಂ. ಸೂರಿಯವರಿಲ್ಲದೆ ಅನಾಥವಾಯಿತು. ರಾಜಕೀಯವಾಗಿ ಅವರನ್ನು ವಿರೋಧಿಸುತ್ತಿದ್ದವರಿಗೆ ಕಾರ್ಮಿಕರ ಪ್ರಶ್ನೆ ಬಂದಾಗ ಅವರ ನಾಯಕತ್ವವನ್ನು ಒಪ್ಪುತ್ತಿದ್ದರು. ಇಂದು ಕಾಂ. ಸೂರಿಯವರು ನಮ್ಮನ್ನು ಅಗಲಿದ್ದಾರೆ. ಅವರ ಜೀವನದ ಉದ್ದಕ್ಕೂ ಯಾವ ಕಾರ್ಮಿಕ ವರ್ಗಕ್ಕಾಗಿ ದುಡಿದರೋ ಆ ಕಾರ್ಮಿಕ ವರ್ಗವನ್ನು ಬಲಿಷ್ಠವಾಗಿ ಕಟ್ಟಿ ಕಾರ್ಮಿಕ ವರ್ಗದಲ್ಲಿ ವರ್ಗ ಜಾಗೃತಿಯನ್ನು ಮತ್ತು ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವುದೇ ನಾವು ಅವರಿಗೆ ಅರ್ಪಿಸುವ ನಿಜವಾದ ಶ್ರದ್ಧಾಂಜಲಿ ಆಗುತ್ತದೆ. ಇಂದು ಸಂದಿಗ್ಧ ಸ್ಥಿತಿಯಲ್ಲಿರುವ ನಮ್ಮ ದೇಶದ ಮತ್ತು ರಾಜ್ಯದ ರಾಜಕೀಯದಲ್ಲಿ ಸೂರಿಯವರಿಲ್ಲದ ಶೂನ್ಯತೆಯನ್ನು ನಮ್ಮ ಪಕ್ಷ ತುಂಬಬೇಕಿದೆ. ಅವರಂತಹ ಧೀಮಂತ ಮತ್ತು ಎದೆಗಾರಿಕೆಯ ನಾಯಕನ್ನು ನಮ್ಮ ಪಕ್ಷ ರಾಜ್ಯದಲ್ಲಿ ಪಡೆಯಬೇಕಾಗಿದೆ. ಕಾಂ.ಸೂರಿ ಅವರ ಆಶಯವನ್ನು ಪೂರೈಸುತ್ತೇವೆಂದು ಕರ್ನಾಟಕದಲ್ಲಿ ನಮ್ಮ ಪಕ್ಷ ತೊಡಬೇಕಾಗಿದೆ. ಪಣ ತೊಡೋಣ. ಕಡೆಯದಾಗಿ ಕಾಂ ಸೂರಿಯವರಿಗೆ ಕ್ರಾಂತಿಕಾರಿ ಕೆಂಪು ವಂದನೆಗಳು.

○

ಕಾಮ್ರೇಡ್ ಸೂರಿ : ಹೋರಾಟದ ಬದುಕು



ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಸಿಐಟಿಯು ವಿನ ರಾಜ್ಯ ಅಧ್ಯಕ್ಷರೂ ಆಗಿದ್ದ ಕಾಮ್ರೇಡ್ ಎಸ್.ಸೂರ್ಯನಾರಾಯಣ ರಾವ್ ಜುಲೈ 1, 2002 ರ ಸಂಜೆ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಹೃದಯಾಘಾತದಿಂದ ನಿಧನರಾದರು. ಕಾಮ್ರೇಡ್ ಸೂರಿಯೆಂದೇ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಜನಪ್ರಿಯರಾಗಿದ್ದ ಅವರು ಸಿಐಟಿಯು ನ ಅಖಿಲಭಾರತ ಉಪಾಧ್ಯಕ್ಷರೂ ಹಾಗೂ ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದರು. ಅವರು ಪತ್ನಿ ಲೀಲಾ ರಾವ್, ಮಕ್ಕಳಾದ ರೇಖಾ ಮತ್ತು ಮೀರಾ ಹಾಗೂ 4 ಮೊಮ್ಮಕ್ಕಳನ್ನೂ ಹಾಗೂ ಅಸಂಖ್ಯಾತ ಪಕ್ಷದ ಸಂಗಾತಿಗಳನ್ನು, ಅಭಿಮಾನಿಗಳನ್ನು ಅಗಲಿ ಹೋಗಿದ್ದಾರೆ.

ಕಾಂ. ಸೂರಿಯವರ ಜನನ ಆಗಸ್ಟ್ 24, 1924 ರಂದು ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಆಯಿತು. ಈ ನಡುವೆ ದೇಶದ ಇತರೆಡೆಯಂತೆ ರಾಜ್ಯದಲ್ಲೂ ವಿದ್ಯಾರ್ಥಿ, ಯುವಜನರ ನಡುವೆ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ವಿದ್ಯಾರ್ಥಿ ಆಂದೋಲನ ಹರಡಲಾರಂಭಿಸಿದಾಗ ಸೂರಿಯವರು ವಿದ್ಯಾರ್ಥಿ ಚಳುವಳಿಗೆ ಧುಮುಕಿದರು. ಇನ್ನೊಬ್ಬ ಕಮ್ಯುನಿಸ್ಟ್ ಮುಂದಾಳುವಾಗಿ ಬೆಳೆದ ಎಂ.ಎಸ್.ಕೃಷ್ಣನ್‌ರವರ ಜತೆ ರಾಜ್ಯದಲ್ಲಿ ಎಐಎಸ್‌ಎಫ್(ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್) ನ ಪ್ರಮುಖ ಮುಖಂಡರಾಗಿ ಬೆಳೆದು ಬಂದರು. 1942 ರಲ್ಲಿ ಗಾಂಧೀಜಿಯ 'ಕ್ವಿಟ್ ಇಂಡಿಯಾ' ಕರೆ ಬಂದಾಗ ಸಕ್ರಿಯವಾಗಿ ಭಾಗವಹಿಸಿದ ಸೂರ್ಯನಾರಾಯಣ ರಾವ್‌ರವರು ಇದಕ್ಕಾಗಿ 18 ತಿಂಗಳು ಬ್ರಿಟಿಷರ ಜೈಲು ವಾಸ ಅನುಭವಿಸಬೇಕಾಯಿತು.

ಪ್ರಧಾನಿ ಇಂದಿರಾಗಾಂಧಿಯವರ ಸಲಹಾಕಾರರಾದ ಶ್ರೀ ಹೆಚ್.ವೈ.ಶಾರದಾ ಪ್ರಸಾದ್, ಡಾ.ಎಚ್.ನರಸಿಂಹಯ್ಯ ಮೊದಲಾದವರು ಈ ಹೋರಾಟದಲ್ಲಿ ಇವರ ಸಹಯೋಗಿಗಳು.

ವಿದ್ಯಾರ್ಥಿ ಮುಖಂಡರಾಗಿ ಅವರು ಚಳುವಳಿಗೆ ನೇತೃತ್ವ ನೀಡಿದ್ದಷ್ಟೇ ಅಲ್ಲ, ಆಗ ಬೆಂಗಳೂರಿಗೆ ಹೊರ ಊರುಗಳಿಂದ ಬರುತ್ತಿದ್ದ ಬಡ ವಿದ್ಯಾರ್ಥಿಗಳಿಗಾಗಿ 'ವಿದ್ಯಾರ್ಥಿ ನೆರವು ಸಮಿತಿ' ಹಾಗೂ ಒಂದು ಹಾಸ್ಟೆಲ್‌ನ್ನು ಸೂರ್ಯನಾರಾಯಣ ರಾವ್ ನಡೆಸಿದ್ದರು.

ಅವರ ತಂದೆ ಸ್ವಾಮಿರಾವ್ ಕೈಗಾರಿಕೋದ್ಯಮಿಯಾಗಿದ್ದರೂ ಸೂರಿಯವರು ತನ್ನ ಕಾಲ ಮೇಲೆಯೇ ನಿಂತು ಬದುಕಲು ನಿರ್ಧರಿಸಿ ಹೆಚ್.ಎ.ಎಲ್.ನಲ್ಲಿ ಕೆಲಸಕ್ಕೆ ಸೇರಿದರು.

ಅವರ ಉತ್ಸಾಹ, ಕಾರ್ಯಶೀಲತೆ, ಬದ್ಧತೆಯನ್ನು ಕಂಡ ಆಗಿನ ರಾಜ್ಯ ಕಾಂಗ್ರೆಸ್ ಅಧ್ಯಕ್ಷರು ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದರು. ಆದರೆ ಸೂರ್ಯನಾರಾಯಣ ರಾವ್ 1948 ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಲು ನಿರ್ಧರಿಸಿದರು. ಅಂದಿನಿಂದ ತಮ್ಮ ಇಡೀ ಜೀವನವನ್ನು ರಾಜ್ಯದ ದುಡಿಯುವ ವರ್ಗಕ್ಕೆ, ಪ್ರಜಾಪ್ರಭುತ್ವ ಆಂದೋಲನಕ್ಕೆ ಮುಡಿಪಿಟ್ಟರು. ಸುಮಾರು ಆರು ದಶಕಗಳ ಅವರ ಸಾರ್ವಜನಿಕ ಜೀವನ ಒಂದು ಹೋರಾಟಮಯ ಜೀವನ.

1956-58 ರ ಅವಧಿಯಲ್ಲಿ, ನಂತರ 1960-62 ರಲ್ಲಿ ಅವರು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಗೊಂಡರು. ಕಮ್ಯುನಿಸ್ಟ್ ಆಂದೋಲನದಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಬಂದು 1964 ರಲ್ಲಿ ತೆನಾಲಿಯಲ್ಲಿ ವಿಶೇಷ ಅಧಿವೇಶನ ನಡೆದಾಗ ಅದರಲ್ಲಿ ಕರ್ನಾಟಕ ಪ್ರತಿನಿಧಿಗಳ ಮುಖಂಡರಾಗಿದ್ದವರು ಕಾಮ್ರೇಡ್ ಸೂರಿಯವರು.

ಪರಿಷ್ಕರಣವಾದದ ವಿರುದ್ಧ ಯಶಸ್ವಿ ಹೋರಾಟ ಸಾರಿದ ಅವರು 1964 ರಲ್ಲಿ ಸಿಪಿಐ(ಎಂ) ಸ್ಥಾಪನೆಗೊಂಡಾಗ ರಾಜ್ಯದಲ್ಲಿ ಸಿಪಿಐ(ಎಂ) ನ್ನು ಬುಡದಿಂದ ಕಟ್ಟಿ ಬೆಳೆಸಿದವರಲ್ಲಿ ಪ್ರಮುಖರು. ಆಗಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆದ ಪ್ರಜಾಪ್ರಭುತ್ವ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮೂರು ತಿಂಗಳ ಭೂಗತವಾಸವನ್ನು ಅನುಭವಿಸಿದರು.

1998 ರಲ್ಲಿ ಅವರು ಕಾಂ. ಪಿ.ರಾಮಚಂದ್ರರಾವ್‌ರವರ ನಿಧನದ ನಂತರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಚುನಾಯಿತರಾದರು. ನಂತರ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಆದರು. ಇತ್ತೀಚೆಗೆ ನಡೆದ ಸಿಪಿಐ(ಎಂ) 17ನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಗೆ ಮರು ಆಯ್ಕೆಗೊಂಡರು.

1975 ರಲ್ಲಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಸೂರ್ಯನಾರಾಯಣ ರಾವ್ ಮತ್ತೆ ಜೈಲುವಾಸ ಅನುಭವಿಸಬೇಕಾಯಿತು.

ಈ ಮೊದಲೇ ಹೇಳಿದಂತೆ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಕಾಮ್ರೇಡ್ ಸೂರಿಯವರದ್ದು ಅಚ್ಚಳಿಯದ ಹೆಸರು. ರಾಜ್ಯದ ಅಸಂಘಟಿತ ಕಾರ್ಮಿಕರನ್ನು ಸಂಘಟಿತರಾಗಿಸಿ ಸಮರಶೀಲ ಹೋರಾಟಗಳಿಗೆ ಇಳಿಸಿದ ಅವರು ನೇತೃತ್ವ ನೀಡಿದ ಹೋರಾಟಗಳು ಹಲವಾರು. 1965 ರ ರಾಮ್ ಕುಮಾರ್ ಮಿಲ್ ಹೋರಾಟ, 1967 ರ ಐತಿಹಾಸಿಕ ಹೋಟೆಲ್ ಕಾರ್ಮಿಕರ ಹೋರಾಟ, 1979 ರಲ್ಲಿ ಬೆಂಗಳೂರನ್ನು ನಡುಗಿಸಿದ ಮೈಕೊ ಕಾರ್ಮಿಕರ ಹೋರಾಟ, ನಂತರ 1980 ರ ಐಟಿಸಿ ಕಾರ್ಮಿಕರ ಹೋರಾಟ, 1981 ರ ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಮಿಕ ಎರಡೂ ತಿಂಗಳಿಗೂ ಹೆಚ್ಚು ಕಾಲ ನಡೆದ ಐತಿಹಾಸಿಕ ಮುಷ್ಕರ, 1991 ರ ಎಸ್ಕಾರ್ಟ್ಸ್ ಕಾರ್ಮಿಕರ ಹೋರಾಟ, ಇತ್ತೀಚೆಗೆ 3 ತಿಂಗಳು ನಡೆದ ಎಲ್ ಅಂಡ್ ಟಿ ಕಾರ್ಮಿಕರ ಹೋರಾಟ ಇವುಗಳಲ್ಲಿ ಕೆಲವಷ್ಟೆ.

1983 ರಲ್ಲಿ ಬೆಂಗಳೂರಿನ ವರ್ತೂರು ಕ್ಷೇತ್ರದಿಂದ ರಾಜ್ಯ ವಿಧಾನಸಭೆಗೆ ಆರಿಸಲ್ಪಟ್ಟ ಕಾಮ್ರೇಡ್ ಸೂರಿ ವಿಧಾನಸಭೆಯಲ್ಲಿ ರಾಜ್ಯದ ಕಾರ್ಮಿಕ ವರ್ಗದ ದನಿಯಾದರು.

ಕಾಮ್ರೇಡ್ ಸೂರ್ಯನಾರಾಯಣ ರಾವ್ ಕರ್ನಾಟಕ ಕಾರ್ಮಿಕರ ಪ್ರತಿನಿಧಿಯಾಗಿ ಹಲವು ಅಂತರ್ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಇದರ ಭಾಗವಾಗಿ ಅವರು ಚೀನಾ, ಪ್ಯಾರಿಸ್, ಸೋವಿಯತ್ ಒಕ್ಕೂಟ, ಕ್ಯೂಬಾ ಹಾಗೂ ಇತ್ತೀಚೆಗೆ ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ನಡೆದ ಜಾಗತೀಕರಣದ -ವಿರೋಧಿ ಸಮ್ಮೇಳನದಲ್ಲಿ ಅವರು ಭಾಗವಹಿಸಿದರು.

ಕಳೆದ ಒಂದು ದಶಕದಲ್ಲಿ ಉದಾರೀಕರಣ - ಖಾಸಗೀಕರಣ-ಜಾಗತೀಕರಣ ಕಾರ್ಮಿಕ ವರ್ಗದ, ಜನಸಾಮಾನ್ಯರ ಬದುಕಿನ ಮೇಲೆ ಸತತ ಧಾಳಿ ನಡೆಸುತ್ತಿರುವಾಗ ಜತೆಗೆ ಕೋಮುವಾದ ದುಡಿಯುವ ಜನಗಳನ್ನು ವಿಭಜಿಸುವ ಹುನ್ನಾರ ನಡೆಸುತ್ತಿರುವಾಗ ಇವುಗಳ ವಿರುದ್ಧ ಕಾರ್ಮಿಕರ, ಜನಸಾಮಾನ್ಯರ ಪ್ರತಿರೋಧಕ್ಕೆ ನೇತೃತ್ವ ನೀಡುವಲ್ಲಿಯೂ ಅವರು ಮುಂಚೂಣಿಯಲ್ಲಿದ್ದರು.

ಕಾಮ್ರೇಡ್ ಸೂರಿಯವರು ತಮ್ಮ ಹೋರಾಟಮಯ ಬದುಕು ಹಾಗೂ ಧೀಮಂತ ನೇತೃತ್ವದ ಗುಣಗಳಿಂದಾಗಿ ಕಾರ್ಮಿಕ ವರ್ಗದಲ್ಲಿ ಅಪಾರ ಅನುಯಾಯಿಗಳನ್ನು ಗಳಿಸಿದ್ದರು. ತಮ್ಮ ಪ್ರಾಮಾಣಿಕ ರಾಜಕೀಯ ಜೀವನದಿಂದಾಗಿ ಕಾರ್ಮಿಕ ಆಂದೋಲನದ ಹೊರಗೂ, ರಾಜ್ಯದ ಪ್ರಜಾಪ್ರಭುತ್ವ ಚಳುವಳಿಯಲ್ಲಿ ಹಲವಾರು ಅಭಿಮಾನಿಗಳನ್ನು ಪಡೆದಿದ್ದರು.

ಅವರ ನಿಧನ ರಾಜ್ಯದ ಕಾರ್ಮಿಕ ಆಂದೋಲನ ಹಾಗೂ ಪ್ರಜಾಪ್ರಭುತ್ವ ಆಂದೋಲನ ಒಂದು ಧೀಮಂತ ಚೇತನವನ್ನು ಕಳೆದುಕೊಂಡಿದೆ.

'We must save the Party'

ಕಾಂ. ಸೂರಿಯವರ ಕೊನೆ ಮಾತು

ಜುಲೈ 1, ಸೋಮವಾರ ಮಧ್ಯಾಹ್ನ ಹೊಸೂರು ರಸ್ತೆಯ ನಾರಾಯಣ ಹೃದಯಾಲಯದ ಹಾಸಿಗೆಯ ಮೇಲೆ ಮಲಗಿದ್ದಾರೆ ಸೂರಿಯವರು. ಉಸಿರಾಟ ಕಷ್ಟವಾಗಿದೆ. ಆಮ್ಲಜನಕ ಪೂರೈಸಲಾಗುತ್ತಿದೆ. ತಮ್ಮ ಜೀವನ ಸಂಗಾತಿ , ಮಡದಿ ಲೀಲಾ, ಮಕ್ಕಳು, ಅಳಿಯ, ಮೈಕೊ ಕಾರ್ಮಿಕ ಮುಖಂಡ ಕಾಂ. ಎಸ್.ಟಿ.ಅರಸು ಅಕ್ಕಪಕ್ಕ ಇದ್ದಾರೆ. ಕಾಂ. ಜಿ.ಸಿ.ಬಯ್ಯಾರೆಡ್ಡಿ ಎರಡು ಹೆಜ್ಜೆ ಹಿಂದೆ ನಿಂತಿದ್ದಾರೆ. ಎಲ್ಲರ ಕಣ್ಣುಗಳಲ್ಲಿ ಆತಂಕ, ದುಃಖ ಮಡುಗಟ್ಟಿದೆ. ಕಾಂ. ಸೂರಿಯವರು ಏನನ್ನೋ ಹೇಳಲು ಚಡಪಡಿಸುತ್ತಿದ್ದಾರೆ. ಆಮ್ಲಜನಕ ಪೂರೈಸುವ ಸಾಧನವನ್ನು ಪಕ್ಕಕ್ಕೆ ಸರಿಸಿದ ಕಾಂ. ಸೂರಿಯವರು ಕೈ ಸನ್ನೆ ಮಾಡಿ ಕಾಂ. ಜಿ.ಸಿ.ಬಯ್ಯಾರೆಡ್ಡಿಯವರನ್ನು ಪಕ್ಕಕ್ಕೆ ಕರೆಯುತ್ತಾರೆ. ಆತ್ಮೀಯವಾಗಿ ಅವರ ಕೈಗಳನ್ನು ಒತ್ತಿ ಹಿಡಿಯುತ್ತಾರೆ. ಬಹುಶಃ ಆ ಹೊತ್ತಿಗಾಗಲೇ ಅವರಿಗೆ ಮನದಟ್ಟಾಗಿದೆ. ತಾನು ಇನ್ನು ಹೆಚ್ಚು ಸಮಯ ಉಳಿಯಲಾರೆನೆಂದು. ಕಮ್ಯುನಿಸ್ಟ್ ಚಳುವಳಿಯ ಈ ಸಮರ್ಪಿತ ಕ್ರಾಂತಿಕಾರಿ ಕೊನೆಯದಾಗಿ ಹೇಳಿದ್ದು 'we must save the party......'

ಸಂಗಾತಿಗಳ ಹೃದಯ ಭಾರವಾಯಿತು. ಕಣ್ಣಂಚು ಒದ್ದೆಯಾಯಿತು. ನರ್ಸ್ ಬಂದು ಮಾತನಾಡಬಾರದೆಂದು ಸೂಚಿಸಿದರು. ಇದೇ ಸೂರಿಯವರ ಕೊನೆಯ ಮಾತಾಯಿತು.

ಜೂನ್ 30, ಭಾನುವಾರ ಕಾಂ. ಸೂರಿಯವರು ತಮ್ಮ ಮನೆಯಲ್ಲಿ ತಾವು ಪಕ್ಷದ ಚೆಕ್‌ಗೆ ಸಹಿ ಮಾಡಬೇಕೆಂದು ಚಡಪಡಿಸುತ್ತಿದ್ದರಂತೆ. ಅವರನ್ನು ಭೇಟಿಯಾದ ಸಂಗಾತಿಗಳ ಬಳಿ ಜೂನ್ 30 ರ 'ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಬೆಳ್ಳಿಹಬ್ಬ' ಆಚರಣೆಯ ಕಾರ್ಯಕ್ರಮ ಬೆಂಗಳೂರಿನಲ್ಲಿ ಹೇಗೆ ನಡೆಯಿತು ಎಂದು ವಿಚಾರಿಸಿಕೊಂಡಿದ್ದಾರೆ. ಬಂದ ಜನಕ್ಕೆ ಎಡಿಎ ರಂಗಮಂದಿರದಲ್ಲಿ ಜಾಗ ಸಾಕಾಗಲಿಲ್ಲ ಎಂಬುದನ್ನು ಕೇಳಿಕೊಂಡಿದ್ದಾರೆ. ಸೂರಿಯವರ ಮನೆಯವರು 'ಚೆಕ್‌ಗೆ ಆಮೇಲೆ ಸಹಿ ಮಾಡಬಹುದು, ಮೊದಲು ಆರೋಗ್ಯ ಸುಧಾರಿಸಲಿ' ಎಂದರಂತೆ. ಅದಕ್ಕೆ ಕಾಂ. ಸೂರಿಯವರು ಕೊಟ್ಟ ಉತ್ತರ "ಇಲ್ಲ ಇಲ್ಲ, ಪಕ್ಷದ ಪೂರ್ಣಾವಧಿ ಕಾರ್ಯಕರ್ತರು ಕಷ್ಟದಲ್ಲಿರುತ್ತಾರೆ. ಪಕ್ಷ allowance ಕೊಡುವುದು ತಡವಾದರೆ ತುಂಬಾ ತೊಂದರೆಯಾಗುತ್ತದೆ". ಹೋರಾಟವೇ ಉಸಿರಾದ, ಕಮ್ಯುನಿಸ್ಟ್ ಪಕ್ಷವೇ ಬದುಕಾದ ಕಾಂ. ಸೂರಿಯವರಿಗೆ ಪಕ್ಷಕ್ಕಾಗಿ ಪೂರ್ಣಾವಧಿ ದುಡಿಯುವ ಸಂಗಾತಿಗಳ ಬಗೆಗೆ ಇದ್ದ ಕಾಳಜಿಯ ಸಾಕ್ಷಿಯಾಗಿ ಈ ಮಾತು ಉಳಿಯುತ್ತದೆ.


ಜೀವನವೆಲ್ಲಾ ಉರಿದ ಈ ಜ್ವಾಲೆ ಕಾರ್ಮಿಕ ಚಳುವಳಿಯ ಚೈತನ್ಯದ ಎರಕ

ಜಿ.ಎನ್.ನಾಗರಾಜ್

ಇಂದು ಕರ್ನಾಟಕದ ಕಾರ್ಮಿಕ ಚಳುವಳಿಗೆ ಎರಗಿದೆಯೊಂದು ಆಘಾತ. ಕಡಲನ್ನು ಕಾಣದ ಬೆಂಗಳೂರಿನಲ್ಲಿ ನೆರೆಯುತ್ತಲಿದೆ ಕಾರ್ಮಿಕ ಸಂದಣಿಯ ಕಡಲು. ಹತ್ತಾರು ಸಾವಿರ ಕಾರ್ಮಿಕರ ಎದೆಗಳಲ್ಲಿ ದುಗುಡ, ದುಮ್ಮಾನಗಳು ಹೆಪ್ಪುಗಟ್ಟಿವೆ. ಕರ್ನಾಟಕದ ಲಕ್ಷಾಂತರ ಕಾರ್ಮಿಕರಿಗೆ ಹೋರಾಟದ ಸ್ಫೂರ್ತಿ ಸಂಕೇತವಾದ ಕಾಂ. ಸೂರಿ ಇನ್ನಿಲ್ಲ. ಕಾರ್ಮಿಕ ಚಳುವಳಿಯ ಸಮರಧೀರತೆಯ ಮೂರ್ತಿ ರೂಪದ ಕಾಂ. ಸೂರಿ ಇನ್ನಿಲ್ಲ. ಕರ್ನಾಟಕದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ರಕ್ತಾಕ್ಷರಗಳಲ್ಲಿ ದಾಖಲಾದ ಹಲವು ಹೋರಾಟಗಳ ಕಲಿ, ಕೆಚ್ಚೆದೆಯ ಭಂಟ ಕಾಂ. ಸೂರಿ ಇನ್ನಿಲ್ಲ. ವಿದ್ಯಾರ್ಥಿ ಚಳುವಳಿಯ ನಾಯಕನಾಗಿ ಬೆಳೆದು ಸ್ವಾತಂತ್ರ್ಯ ಚಳುವಳಿಯ ಧೀರ ನಾಯಕರಾಗಿ ಬೆಳಗಿದ ಕಾಂ. ಸೂರಿಯವರ ಸಿಂಹ ಗರ್ಜನೆ ಇನ್ನು ಕರ್ನಾಟಕದಲ್ಲಿ ಮೊಳಗದು ಎಂಬ ಸಂಗತಿಯೇ ಬರಸಿಡಿಲಾಗಿ ಬಂದೆರಗಿದೆ ಇಂದು. ಕಾರ್ಮಿಕ ಚಳುವಳಿಯ ನಾಯಕರಾಗಿ ಇಡೀ ಜೀವನ ಸವೆಸಿದರೂ ಲಕ್ಷಾಂತರ ರೈತರ ನೆನಪಿನ ಪುಟಗಳಲ್ಲಿ ಅಚ್ಚೊತ್ತಿರುವ ಕಾಂ. ಸೂರಿಯವರನ್ನು ನರಗುಂದ, ನವಲಗುಂದ ಹೋರಾಟದಲ್ಲಿ ಬೆಂಗಳೂರಿಗೆ ಧಾವಿಸಿದ ಲಕ್ಷಾಂತರ ಮಂದಿ ರೈತರಿಗೆ 'ಊಟವೆಲ್ಲಿ' ಎಂಬ ಪ್ರಶ್ನೆ ಬೃಹದಾಕಾರವಾಗಿ ದೇವರಾಜ ಅರಸುರಂತಹವರನ್ನೂ ಕಾಡಿದಾಗ ಬೆಂಗಳೂರಿನ ಕಾರ್ಮಿಕರಿಗೆ ರೈತ ಸಮುದಾಯಕ್ಕೆ ಊಟ ಹಾಕುವ ಶಕ್ತಿ ಇದೆ ಎಂದು ಸವಾಲಿಗೆ ಎದೆಯೊಡ್ಡಿದ ಕಾಂ. ಸೂರಿಯವರ ಆ ಹುಮ್ಮಸ್ಸು ಈಗ ನೆನಪಾಗಲಿದೆ.

1948 ರಿಂದ 1951 ರ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ 'ಬ್ಯಾನ್' ಹೇರಿದ್ದಾಗ ರೈಲ್ವೆ ಹಳಿಗಳ ಮೇಲೆಯೇ ನೂರಾರು ಕಿ.ಮಿ.ನಡೆದು ಉಪವಾಸ, ವನವಾಸಗಳನ್ನು


ಪುಟ 4 ಕ್ಕೆ



ಅಗಲಿಹೋದ ಹಿರಿಯ ಚೇತನಗಳು ಹಿಂದಿನ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಜೊತೆಗೆ

ಲಕ್ಷಾಂತರ ಕಾರ್ಮಿಕರ ಬದುಕಿನ ಬೆಳಕು ಕಾಂ. ಸೂರಿ

ಬೆಂಗಳೂರಿನ ಕಾರ್ಮಿಕವರ್ಗ ಮತ್ತು ಕಾಮ್ರೇಡ್ ಸೂರಿಯವರಿಗೆ ಬಿಡಿಸಲಾಗದ ಬಂಧ. ಕಾರ್ಮಿಕವರ್ಗದ ಬದುಕಿನ ಬದಲಾವಣೆಯೊಂದಿಗೆ ಬೆಸೆದುಹೋದ ಕಾಮ್ರೇಡ್ ಸೂರಿಯವರು ಇನ್ನಿಲ್ಲವೆಂಬುದು ನಂಬಲಸಾಧ್ಯವಾದ ಸತ್ಯ. ಕಾರ್ಮಿಕ ಚಳುವಳಿಗೆ ಮತ್ತು ಕಮ್ಯುನಿಸ್ಟ್ ಚಳುವಳಿಗೆ ಇದರಿಂದ ತುಂಬಲಾರದ ನಷ್ಟ. ಪಕ್ಷದ ಮನಸ್ಸುಗಳಲ್ಲಿ ಮತ್ತು ಎದೆಗಳಲ್ಲಿ ನಡುಕ ಹುಟ್ಟಿಸುತ್ತಿದ್ದ ಮತ್ತೊಂದು ಹೆಸರೇ ಕಾಮ್ರೇಡ್ ಸೂರಿ. ಮಾರ್ಕ್ಸ್‌ವಾದದ ಅಡಿಯಲ್ಲಿ ಸಿಪಿಐ(ಎಂ)ನ ಸರಿಯಾದ ಧೋರಣೆಯಲ್ಲಿ ದೃಢವಾದ ನಂಬಿಕೆಯಿಟ್ಟು ಅತ್ಯಂತ ಶಿಸ್ತಿನಿಂದ ನಡೆದವರು ಸೂರಿ.



ಪಕ್ಷದ ಬಳ್ಳಾರಿ ರಾಜ್ಯ ಸಮ್ಮೇಳನದ ನಂತರ ಬೆಂಗಳೂರಿನ ಪಕ್ಷದ ಸಮಿತಿಗೆ ಮೇಲ್ಸಮಿತಿಯ ಪರವಾಗಿ ಜವಾಬ್ದಾರಿಯನ್ನು ಹೊತ್ತಿದ್ದ ಸೂರಿಯವರು ಬೆಂಗಳೂರಿನಲ್ಲಿ ಪಕ್ಷವನ್ನು ಕಟ್ಟುವುದರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದರು. ಪಕ್ಷವನ್ನು ಶಿಸ್ತಿನಿಂದ ಕಟ್ಟಬೇಕೆಂಬ ಬಗ್ಗೆ ಮುಖಂಡರಿಂದ ಹಿಡಿದು ಸಾಮಾನ್ಯ ಸದಸ್ಯರವರೆಗೆ ಮುಲಾಜಿಲ್ಲದೆ ಎಚ್ಚರಿಸುತ್ತಿದ್ದರು. ಬೆಂಗಳೂರಿನಲ್ಲಿ ಪಕ್ಷವನ್ನು ರಾಜಕೀಯವಾಗಿ ವಿಸ್ತರಿಸಲು ಇತ್ತೀಚೆಗೆ ವಿಶೇಷ ಯೋಜನೆಯನ್ನು ರೂಪಿಸಿದಾಗ ಎಚ್ಚರಿಕೆಯನ್ನು ನೀಡುತ್ತಲೇ ಬೆನ್ನು ತಟ್ಟಿದವರು ಸೂರಿಯವರು.

ಬೆಂಗಳೂರು ಜಿಲ್ಲಾ ಸಮಿತಿಯು ನೆಚ್ಚಿನ ಸೂರಿಗೆ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಸ್ವಾತಂತ್ರ್ಯಾನಂತರದ ಬೆಂಗಳೂರಿನ ಬೆಳವಣಿಗೆಯನ್ನು, ಇಲ್ಲಿನ ಜನರ ಆರ್ಥಿಕ, ರಾಜಕೀಯ, ಸಾಮಾಜಿಕ ಬದಲಾವಣೆಗಳನ್ನು ಯಾರೇ ಅಭ್ಯಾಸ ಮಾಡಿದರೂ ಕಾಮ್ರೇಡ್ ಸೂರಿಯವರನ್ನು ಮರೆತು ಮಾಡುವ ಹಾಗಿಲ್ಲ. ಬೆಂಗಳೂರಿನ ಅತ್ಯಂತ ಅಸಂಘಟಿತ ಮತ್ತು ನಿಕೃಷ್ಟ ಬದುಕಿನ ದುಡಿಯುವ ಜನತೆಯನ್ನು ಮೇಲಕ್ಕೆತ್ತುವ ಕಾಯಕವನ್ನು ಯಾರ ಮರ್ಜಿಗೂ ಒಳಗಾಗದೆ ನಡೆಸಿದ ಕಾಂ.ಸೂರಿಯವರದು ನಿಷ್ಠುರ ನಡೆ. ಬೆಂಗಳೂರಿನ ಲಕ್ಷಾಂತರ ಮಂದಿ ಕಾರ್ಮಿಕರ ಬದುಕಿಗೆ ಬೆಳಕಾದವರು ಕಾಂ. ಸೂರಿ.

ಬೆಂಗಳೂರಿನಲ್ಲಿ ಇಂದೊಂದು ಕಾರ್ಮಿಕ ಚಳುವಳಿ, ಅದಕ್ಕೊಂದು ಆತ್ಮಸ್ಥೈರ್ಯ, ಹೋರಾಟದ ಕೆಚ್ಚು ಏನಾದರೂ ಬಂದಿದ್ದರೆ ಅದೇ ಕಾಮ್ರೇಡ್ ಸೂರಿ. ಮಾಲೀಕವರ್ಗದ

ಕಮ್ಯುನಿಸ್ಟ್ ಚಳುವಳಿಯ ಎಲ್ಲಾ ಏಳುಬೀಳುಗಳ ಅಪಾರ ಅನುಭವದೊಂದಿಗೆ ಹೊಸ ಪೀಳಿಗೆ ಯುವಜನರಿಗೆ ಎಂದೆಂದೂ ಉತ್ಸಾಹ ಮತ್ತು ಸ್ಫೂರ್ತಿಯ ಚಿಲುಮೆಯಾಗಿದ್ದ ಕಾಂ. ಸೂರಿಯವರು ಇನ್ನಿಲ್ಲವೆಂಬುದನ್ನು ನಂಬಲು ಕಷ್ಟವೇ ಸರಿ. ಸೂರಿಯವರಿಲ್ಲದ ಈ ಕೊರತೆಯನ್ನು ತುಂಬುವುದಾದರೂ ಹೇಗೆ? 'save the Party' ಯೆಂಬ ಸೂರಿಯವರ ಕೊನೆಯ ಮಾತನ್ನು ಉಳಿಸಲು, ದುಡಿಯುವ ವರ್ಗದ ಐಕ್ಯತೆಯನ್ನು ಕಟ್ಟೋಣ. ಸಿಪಿಐ(ಎಂ)ನ ಬೆಂಗಳೂರು ಜಿಲ್ಲಾ ಸಮಿತಿಯು ಅತ್ಯಂತ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

- ಪ್ರಕಾಶ್ ಕೆ.
ಜಿಲ್ಲಾ ಕಾರ್ಯದರ್ಶಿ
ಬೆಂಗಳೂರು ಸಿಪಿಐ(ಎಂ)

ಕಾಮ್ರೇಡ್ ಸೂರಿ ಇನ್ನಿಲ್ಲ...

ಪಿ.ಜಿ.ಕೆ.ನಾಯರ್

ಕಾಮ್ರೇಡ್ ಸೂರಿಯವರ ನಿಧನದೊಂದಿಗೆ ಕರ್ನಾಟಕದ ಎಡಪಂಥೀಯ ಪಕ್ಷಗಳಲ್ಲಿ ಸ್ವಾತಂತ್ರ್ಯ ಹೋರಾಟದೊಂದಿಗೆ ಇದ್ದ ಕೊನೆಯ ಕೊಂಡಿ ಕಳಚಿ ಬಿದ್ದಿದೆ.

ಪ್ರಚಂಡ ಭಾಷಣಕಾರ, ಕಾರ್ಮಿಕ ವರ್ಗದ ಕ್ರಾಂತಿಯ ಬದ್ಧ ಪ್ರತಿಪಾದಕ ಹಾಗೂ ಕರ್ನಾಟಕದ ಅತ್ಯಂತ ಪರಿಣಾಮಕಾರಿ ಟ್ರೇಡ್ ಯೂನಿಯನ್ ಮುಖಂಡ- ಇವು ಮೂರೂ ಮೇಳವಿಸಿದ್ದ ಇವರ ನಿಧನದೊಂದಿಗೆ ಒಂದು ದೊಡ್ಡ ಶೂನ್ಯ ಉಂಟಾಗಿದೆ. ಏಕೆಂದರೆ ಎಸ್. ಸೂರ್ಯನಾರಾಯಣ ರಾವ್ ರವರು ಕರ್ನಾಟಕದಲ್ಲಿ ಕಾರ್ಮಿಕ ವರ್ಗದ ಪಕ್ಷದ, ರಾಜ್ಯದ ಅತ್ಯಂತ ಪರಿಣಾಮಕಾರಿ ಕಾರ್ಮಿಕ ಸಂಘಟನೆ ಸಿಐಟಿಯುನ ಸೂತ್ರ ಹಿಡಿದಿದ್ದವರು, ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್, ಮೈಕೋ ಎಂಪ್ಲಾಯೀಸ್ ಅಸೋಸಿಯೇಶನ್, ಹರಿಹರ ಪಾಲಿಫೈಬರ್ಸ್ ಎಂಪ್ಲಾಯೀಸ್ ಯೂನಿಯನ್, ವಿಕ್ರಾಂತ್ ಇತ್ಯಾದಿ ಕಾರ್ಮಿಕ ಸಂಘಗಳ ಮುಖಂಡರು.

ಸ್ವಾತಂತ್ರ್ಯ ಆಂದೋಲನದ ಕೊನೆಯ ಹಂತದಲ್ಲಿ ಚಳುವಳಿಗೆ ಧುಮುಕಿದ ಸೂರಿಯವರು ಸ್ವಾತಂತ್ರ್ಯದ ನಂತರವೂ ಅದನ್ನು ಮುಂದಕ್ಕೊಯ್ದರು. ಏಕೆಂದರೆ ಬಿಳಿ ತೊಗಲಿನವರ ಜಾಗದಲ್ಲಿ ಬಿಳಿ ಟೋಪಿಯವರನ್ನು ಕೂರಿಸಿದರೆ ಜನತೆಗೆ ಸ್ವಾತಂತ್ರ್ಯ ಸಿಕ್ಕಂತಾಗಲಿಲ್ಲ ಎಂದು ಅವರು ಅರಿತಿದ್ದರು. ವಿದ್ಯಾರ್ಥಿಗಳನ್ನು, ಕಾರ್ಮಿಕರನ್ನು, ರೈತರನ್ನು ಸಂಘಟಿಸಿ ಹೋರಾಟವನ್ನು ಮುಂದುವರೆಸಿದರು. ನೆಹರೂ ಸರಕಾರ ಪಕ್ಷದ ಮೇಲೆ ನಿಷೇಧ ಹೇರಿದಾಗ ಅವರು ಭೂಗತವಾಸ ನಡೆಸಿದರು.

ಐವತ್ತರ ದಶಕದ ಆರಂಭದಲ್ಲಿ ಅವರು ಜವಳಿ, ರೇಶ್ಮೆ ಇತ್ಯಾದಿ ಹಲವಾರು ವಲಯಗಳ ಕಾರ್ಮಿಕರನ್ನು ಅಪಾರ ಸಂಖ್ಯೆಯಲ್ಲಿ ಸಂಘಟಿಸಿದರು. ಜವಳಿ ಕಾರ್ಮಿಕರ ಆಂದೋಲನದಲ್ಲಿ ಅವರೊಬ್ಬ ಪ್ರಮುಖ ಮುಖಂಡರಾಗಿದ್ದರು- ರಾಜಾ ಮಿಲ್, ಮಿನರ್ವ ಮಿಲ್, ಸುಭದ್ರಾ ಮಿಲ್, ರಾಮ್‌ಕುಮಾರ ಮಿಲ್, ದಾವಣಗೆರೆಯ ಗಣೇಶ ಮಿಲ್ ಇತ್ಯಾದಿ.

ಪಕ್ಷದಲ್ಲಿ ಒಡಕು ಬಂದಾಗ ತೆನಾಲಿ ಸಮಾವೇಶದಲ್ಲಿ ಭಾಗವಹಿಸಿದ ಮೊದಲಿಗರಲ್ಲಿ ಅವರೊಬ್ಬರು. ಅವರೊಂದಿಗೆ ಎಂ ಹೆಚ್ ಕೃಷ್ಣಪ್ಪ, ಹೆಚ್ ಎಸ್ ರಾಮರಾವ್ ಮತ್ತು ಚಂದುಕುಟ್ಟಿ ನಾಯರ್ ಭಾಗವಹಿಸಿದರು.

ಭಾರತ- ಚೀನಾ ಯುದ್ಧದ ಸಮಯದಲ್ಲಿ ಕಾಮ್ರೇಡ್ ಸೂರಿ ಬಂಧನಕ್ಕೊಳಗಾದರು.

ಎಪ್ಪತ್ತರ ದಶಕದ ಆರಂಭದಲ್ಲಿ ಅವರನ್ನು ದಾವಣಗೆರೆಯ ಒಂದು ಕೊಲೆ ಕೇಸಿನಲ್ಲಿ ಸಿಲುಕಿಸಲಾಗಿತ್ತು. ಇದರಿಂದಾಗಿ ಸಿಐಟಿಯು ಸ್ಥಾಪನೆಗೊಂಡಾಗ ಕಲ್ಕತ್ತೆಗೆ ಹೋಗಲು ಅವರಿಗಾಗಿರಲಿಲ್ಲ. ಆದರೂ ಸಿಐಟಿಯು ರಾಜ್ಯ ಸಮ್ಮೇಳನ ಅವರನ್ನು ಅಧ್ಯಕ್ಷರಾಗಿ ಆರಿಸಿತು.

ನಿಜವಾಗಿ ಎಐಟಿಯುಸಿಯ ಒಡಕಿನ ಮೊದಲ ದಿನಗಳಲ್ಲಿ ಸೂರಿಯವರು ಕರ್ನಾಟಕ ಪ್ರದೇಶ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ತುರ್ತು ಪರಿಸ್ಥಿತಿ ಸಮಯದಲ್ಲಿ ರೋರಿಕ್ ಕುಟುಂಬದ ಒಡೆತನದ ತಾತಗುಣಿ ಎಸ್ಟೇಟ್‌ನ ಕಾರ್ಮಿಕರನ್ನು ಸಂಘಟಿಸಿದ್ದಕ್ಕೆ ಅವರನ್ನು ಜತೆಗೆ ಪಿ. ಜಗನ್ನಾಥ್ ಮತ್ತು ದೇವಿಕಾ ರಾಣಿಯ ಡ್ರೈವರ್ ಚಿನ್ನಪ್ಪರನ್ನು ಬಂಧಿಸಲಾಗಿತ್ತು.

ಮೈಕೋ ಮತ್ತು ಐಟಿಸಿಯ ಕಾರ್ಮಿಕರನ್ನು ಸಂಘಟಿಸುವ ಕೆಲಸ ಕೈಗೆತ್ತಿಕೊಂಡ ಸೂರಿಯವರು ಇದರಿಂದಾಗಿ ಬಹಳ ಕಷ್ಟಗಳನ್ನು ಅನುಭವಿಸಬೇಕಾಯಿತು.

ಕಾಮ್ರೇಡ್ ಸೂರಿ 1983ರಲ್ಲಿ ಮುಂಬೈಯಲ್ಲಿ ನಡೆದ ಸಿಐಟಿಯುನ ಅಖಿಲ ಭಾರತ ಅಧಿವೇಶನದಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

ಜನಗಳಿಗೆ ಅವರ ಬದ್ಧತೆ ಹಾಗೂ ಅವರ ಅನುಭವಗಳು, ವಿಶೇಷವಾಗಿ ಭೂಗತ ಚಳುವಳಿಯ ಒತ್ತಡಗಳು ಅವರ ಸ್ವಭಾವವನ್ನು ಗಮನಾರ್ಹಗೊಳಿಸಿದ್ದವು. ಅಲ್ಲಿ ನಯ - ನಾಜೂಕಿಗೆ ಸ್ಥಾನವಿರಲಿಲ್ಲ. ಅವರ ತೀಕ್ಷ್ಣ ನಾಲಗೆಯ ಏಟು ತಿನ್ನದವರಿಲ್ಲ. ಆದರೆ ಅವು ಎಂದೂ ಅವರ ನಿಜವಾದ ಆಶಯಗಳನ್ನು ತೋರಿಸಲಿಲ್ಲ. ಅವರ ಆಶಯ ಪ್ರಶ್ನಾತೀತವಾಗಿತ್ತು.

ಕಾಮ್ರೇಡ್ ಸೂರಿಯವರನ್ನು ಕಳಕೊಂಡು ಉಂಟಾಗಿರುವ ತೆರವು ನಿಜಕ್ಕೂ ದೊಡ್ಡದು. ಯಾವುದೇ ಒಬ್ಬ ವ್ಯಕ್ತಿ ಅದನ್ನು ತುಂಬಲು ಸಾಧ್ಯವಿಲ್ಲ.

1978 ರ ನಂತರ ಸಿಐಟಿಯುವಿನಲ್ಲಿ ಅವರದ್ದು ಒಂದು ಬೃಹತ್ ವ್ಯಕ್ತಿತ್ವ.

......ಕಾರ್ಮಿಕ ಚಳುವಳಿಯ ಚೈತನ್ಯದ ಎರಕ

ಪುಟ 3 ರಿಂದ

ಅನುಭವಿಸುತ್ತಾ ಸ್ಮಶಾನದಲ್ಲಿ ಬಿಸಾಡಿ ಹೋದ ಅಕ್ಕಿಯನ್ನೇ ಅನ್ನ ಮಾಡಿ ಕಲ್ಲು ಬಂಡೆಯನ್ನೇ ತೊಳೆದು ತಟ್ಟೆ ಮಾಡಿ ಬಡಿಸಿಕೊಂಡು ತಿಂದು ಈ ಚೇತನ ಕಾರ್ಮಿಕ ಚಳುವಳಿಗಿಳಿಯಿತು. ಚಳುವಳಿಯ ಜೀವನದ ಆರಂಭ ಕಾಲದಿಂದ ಸರಿಸುಮಾರು 80ರ ದಶಕದವರೆಗೆ ಅತ್ಯಂತ ಕಷ್ಟ ಕಾರ್ಪಣ್ಯಗಳಲ್ಲಿ ಜೀವನವನ್ನು ತೇದ ಕಾಂ. ಸೂರಿಯವರ ಕುಟುಂಬ ಅನುಭವಿಸಿದ ಸಂಕಟಗಳು ಕೂಡ ಸ್ಮರಣಾರ್ಹ. ಅವರ ಪತ್ನಿ ಖಾಸಗಿ ಪ್ರಾಥಮಿಕ ಶಾಲೆಯೊಂದರಲ್ಲಿ ಅಲ್ಪಾದಾಯದ ಶಿಕ್ಷಕಿ ಹುದ್ದೆಯಲ್ಲಿ ದುಡಿದು ಕುಟುಂಬವನ್ನು ಸಲಹಿದ ಕಡು ಯಾತನೆಯ ದಿನಗಳವು.

ಹೀಗೆ ದೀಪವೊಂದು ತಾನು ಬೆಂಕಿಯಲ್ಲಿ ಬೇಯುತ್ತಾ ಲೋಕಕ್ಕೆಲ್ಲಾ ಬೆಳಕನ್ನೀಯುವಂತೆ ಕಾಂ. ಸೂರಿ ಕಾರ್ಮಿಕರ ಮನಸ್ಸಿನಲ್ಲಿ ಬಂಡವಾಳಶಾಹಿಗಳ ಶೋಷಣೆಯ ವಿರುದ್ಧ ಉರಿಯುತ್ತಿದ್ದ ಕಿಚ್ಚಿಗೆ ಹೋರಾಟದ ಕಿಡಿ ಹತ್ತಿಸಿದವರು. ಬೆಂಗಳೂರು ನಗರದ ಅಷ್ಟೇ ಏಕೆ ಕರ್ನಾಟಕದ ಹಲವು ದಿಕ್ಕುಗಳಲ್ಲಿ ಬೆಂದು ಹೋಗುತ್ತಿದ್ದ ಕಾರ್ಮಿಕರ ಬಾಳಿಗೆ ನೀರೆರೆದವರು, ಅವರ ಜೀವನಮಟ್ಟ ಏರಿಸಿ ತೃಪ್ತಿಕರ ಬದುಕನ್ನು ಬಾಳಲು ನೆರವಾದವರು. ಇಂದು ಬೆಂಗಳೂರಿನಲ್ಲಿ ಹಲವು ಸಾವಿರ ಕಾರ್ಮಿಕರು ಅದರಲ್ಲಿಯೂ ಖಾಸಗಿ ಕಾರ್ಖಾನೆಗಳು ತಮ್ಮದೇ ಮನೆಗಳಲ್ಲಿ ವಾಸಿಸುತ್ತಾ ಎರಡು ಚಕ್ರದ ವಾಹನಗಳಲ್ಲಿ ಸಂಚರಿಸುತ್ತಾ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಯತ್ನ ನಡೆಸುತ್ತಿರುವುದರಲ್ಲಿ ಸೂರಿಯವರ, ಅವರು ಭಾಗವಾಗಿದ್ದ ಸಿಐಟಿಯು ಕೊಡುಗೆ ಇದೆ.

ಹಲವು ಕಾರ್ಮಿಕ ಹೋರಾಟಗಳ ಕಲಿಯಾಗಿ ಕಾರ್ಮಿಕರ ನಾಡಿಮಿಡಿತವನ್ನು ಕ್ಷಣಮಾತ್ರದಲ್ಲಿ ಅರಿತು ಅವರನ್ನು ಹೋರಾಟದ ಕಣಕ್ಕೆ ಸೆಳೆದ ಸೂರಿ ಬೆಂಗಳೂರಿನ ಬಂಡವಾಳಶಾಹಿಗಳು ಹಳೆಯ ಶೆಟ್ಟರ ಲೆಕ್ಕಾಚಾರವನ್ನು ಕೈಬಿಟ್ಟು ಉತ್ತಮ, ಆಧುನಿಕ ನಿರ್ವಹಣೆಯನ್ನು ಕಲಿಯಲು ಅಪರೋಕ್ಷವಾಗಿ ಕಾರಣರಾದವರು.

ಕಾರ್ಮಿಕ ಚಳುವಳಿಯನ್ನು ದಿಕ್ಕು ಗೆಡಿಸಲು ಕುತಂತ್ರ ನಡೆಸುತ್ತಿದ್ದ ಆಳುವವರ್ಗಗಳ ಮತ್ತು ಅವರ ಏಜೆಂಟರುಗಳಿಗೆ ಸಿಂಹಸ್ವಪ್ನವಾಗಿದ್ದರು ಕಾಂ.ಸೂರಿ. ಮೈಕೊ ಹೋರಾಟದ ಸಮಯದಲ್ಲಿ ಕರ್ನಾಟಕದ ಅತ್ಯಂತ ದುಷ್ಟ ಸರ್ಕಾರವಾಗಿದ್ದ ಗುಂಡೂರಾವ್ ಮತ್ತು ಅವರ ನಿಕಟ ಮಿತ್ರ ಸಂಸತ್ ಸದಸ್ಯ ಎಫ್.ಎಂ.ಖಾನ್‌ರವರ ಜೋಡಿಯನ್ನು ಎದುರಿಸಿದ ಎದೆಗಾರಿಕೆ ಹಾಗೂ ಕಾರ್ಮಿಕ ಹೋರಾಟದ ತಂತ್ರಗಳು ಕರ್ನಾಟಕದ ಕಾರ್ಮಿಕ ನಾಯಕರೆಲ್ಲರಿಗೂ ಒಂದು ಪಾಠ. ಅವರ ತಂತ್ರಗಾರಿಕೆ ಅವರ ಶತ್ರುಗಳೂ ಮೆಚ್ಚುವಂತಹದು. ಬಂಡವಾಳಶಾಹಿಗಳ ವಿರುದ್ಧ ಹೋರಾಟದಂತೆಯೇ ಅವರ ಏಜೆಂಟರಂತೆ ವರ್ತಿಸುತ್ತಿದ್ದ ಸುಧಾರಣಾವಾದಿ, ಅವಕಾಶವಾದಿ ಕಾರ್ಮಿಕ ನಾಯಕರನ್ನು ಕೂಡ ಸೂರಿ ಜಾಲಾಡುತ್ತಿದ್ದರು. ಕಾರ್ಮಿಕ ಚಳುವಳಿಯಲ್ಲಿ ಅವರು ತೋರುತ್ತಿದ್ದ ಸಮರಧೀರತೆಯೇ ಕಾರ್ಮಿಕರ ಹಿತರಕ್ಷಣೆಗೆ ಅವರ ಕಂಕಣಬದ್ಧತೆಯೇ ಅವರನ್ನು ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ನಿಷ್ಠರಾಗಿ ಉಳಿಯುವಂತೆ ಮಾಡಿತು. ಬೆಂಗಳೂರಿನಲ್ಲಂತೂ ಸೂರಿ ಎಂದರೆ ಸಿಪಿಐ(ಎಂ) ಎನ್ನುವಂತಾಯಿತು. ಯಾವುದೇ ರಾಜಕೀಯ ಪಕ್ಷದ ನಾಯಕರೂ ಕೂಡ ಸೂರಿಯವರ ಈ ಸಮರಧೀರತೆಗೆ ಮಾರ್ಕ್ಸ್‌ವಾದಿ ರಾಜಕೀಯ ನಿಷ್ಠೆಗೆ ಗೌರವ ಕೊಡುವಂತಾಯಿತು.

ಜೀವನದ ಕೊನೆಯ ಕ್ಷಣಗಳವರೆಗೂ ಬಿಡದೆ ಅವಿಶ್ರಾಂತವಾಗಿ ದುಡಿದ ಅವರ ಆರು ದಶಕಗಳ ನಿರಂತರ ಶ್ರಮಕ್ಕೆ ಇನ್ನೂ ಹಲವು ಪಟ್ಟು ಹೆಚ್ಚಿನ ಪ್ರತಿಫಲ, ಪಕ್ಷದ ಬೆಳವಣಿಗೆ ಸಾಧ್ಯವಾಗಬೇಕಾಗಿತ್ತು ಎನ್ನುವ ಕೊರಗು ನನ್ನಂತಹ ಅನೇಕರಲ್ಲಿದೆ. ತಮ್ಮ ಅವಿಶ್ರಾಂತ ಕೆಲಸದ ಜೊತೆ ಜೊತೆಗೆ ಮಾರ್ಕ್ಸ್‌ವಾದದ ಇನ್ನೂ ಹೆಚ್ಚಿನ ತಿಳುವಳಿಕೆ, ಅಳವಡಿಕೆಯನ್ನು ಸಾಧ್ಯ ಮಾಡಿಕೊಳ್ಳುವ ಮೂಲಕ ಈ ಯಶಸ್ಸನ್ನು ಪಕ್ಷದ ಕಾರ್ಯಕರ್ತರು ಕಾಣಬೇಕಾಗಿದೆ.

ಒಟ್ಟಿನಲ್ಲಿ ಜೀವನವೆಲ್ಲಾ ಉರಿದ ಈ ಕ್ರಾಂತಿ ಜ್ವಾಲೆ ಇಂದು ನಂದಿಹೋಗಿದೆ. ಆದರೆ ನಿಗಿನಿಗಿ ಕೆಂಡ ಹೊತ್ತಿಸಿದ ಹೋರಾಟದ ಬೆಳಕಿನಲ್ಲಿ ನಾವು ಮುನ್ನಡೆಯೋಣ.

